ಹೋಗುವುದಿಲ್ಲ. ನಾನು ರಾಜಕೀಯ ಮಾಡಲಿಕ್ಕೆ ಹೊರಟಿರುವುದು, ನಾನು ಹೋರಾಟ ಮಾಡುತ್ತಿರುವಂಥದ್ದು, ಈ ಉತ್ತರ ಕರ್ನಾಟಕದ ಜನರ ಹೃದಯದಲ್ಲಿ ನನ್ನ ಹೆಸರನ್ನು ಸ್ಥಾಪನೆ ಮಾಡಿಕೊಳ್ಳಬೇಕೆಂದು ನಾನು ಹೋರಾಟ ಮಾಡುತ್ತಿದ್ದೇನೆ. ಆದ್ದರಿಂದ, ಈ ವಿಷಯದಲ್ಲಿ ಈ ಸಭೆಯಲ್ಲಿ, ಮೇಲ್ಮನೆಯಲ್ಲಿ, ಕುಮಾರಸ್ವಾಮಿಯವರನ್ನು ಕರೆಯಲಿಲ್ಲವೆಂದು ಏನು ಚರ್ಚೆ ಮಾಡಿಕೊಂಡಿದ್ದಾರೆ ಅದರ ಬಗ್ಗೆ ನನಗೆ ಯಾವುದೇ ಬೇಸರವಿಲ್ಲ. ಆ ಕಟ್ಟಡದಲ್ಲಿ ಮುಂದಿನ ವರ್ಷ ವಿಧಾನ ಸಭೆಯ ಕಲಾಪಗಳನ್ನು ನಡೆಸುತ್ತೇವೆಂದು ಮುಖ್ಯಮಂತ್ರಿಗಳು ಮೊನ್ನೆ ಘೋಷಣೆ ಏನು ಮಾಡಿದ್ದಾರೆ, ಮುಂದಿನ ವರ್ಷ ಆ ಕಟ್ಟಡವನ್ನು ಸಂಪೂರ್ಣ ಗೊಳಿಸಿ, ಅಲ್ಲಿ ಕಾರ್ಯಕ್ರಮ ಮಾಡುವುದಕ್ಕೆ ಜಾಲನೆ ಕೊಟ್ಟು, ಮುಂದಿನ ವರ್ಷ ಆ ಹೊಸ ಕಟ್ಟಡದಲ್ಲಿ ವಿಧಾನ ಸಭಾ ಅಧಿವೇಶನ ನಡೆದರೆ ನಾನು ಮುಖ್ಯಮಂತ್ರಿಗಳನ್ನು ಇವತ್ತೂ ನಾನು ಅಭಿನಂದಿಸುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ.

4. <u>ಪ್ರಕಟಣೆ</u>

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ವಿಧೇಯಕವನ್ನು ಇಂದು ದಿನಾಂಕ 24ನೇ ಜನವರಿ 2009ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಿದೆ ಎಂದು ತಿಳಿಸಿರುತ್ತಾರೆ.

ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

[ಗೊಂದಲ]

ಈಗಾಗಲೇ ಟೈಮ್ ಆಗಿದೆ. ಇವತ್ತು ನಾವು 1 ಗಂಟೆಗೆ ಸದನ close ಮಾಡಬೇಕಾಗಿತ್ತು. ಸಮಯದ ಅಭಾವದಿಂದ ತೊಂದರೆಯಾಗಿದೆ. ಇನ್ನು ಚರ್ಚೆ ಬೇಡ.

[ಗೊಂದಲ]

ಡಾ॥ ಬಿ.ಎಸ್. ಯಡಿಯೂರಪ್ಪ :- ಆಮೇಲೆ ಬೇಕಾದರೆ ಮಾನ್ಯ ಸದಸ್ಯರುಗಳು clarification ಕೇಳಲಿ.